**ದಿನಾಂಕಃ 24-11-2023** **ಓ.ಎಸ್ ನಂ.88/2014(ಡಿ.ಡಬ್ಲ್ಯೂ 3)**

ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

**ಪಾಟೀ ಸವಾಲು** ಶ್ರೀ ಆರ್ ಬಿ ಪಿ ವಕೀಲರಿಂದ ವಾದಿಯರ ಪರಃ

ನನಗೆ ವಂಶಾವಳಿಯಲ್ಲಿ ಕಾಣಿಸಿದ ಲಕ್ಷ್ಮಣ ನಂತರದ ಈಚೆಗೆ ಮಾಹಿತಿ ಇರುತ್ತದೆ. ಲಕ್ಷ್ಮಣ ಈತನ ತಂದೆಯ ಹೆಸರು ನನಗೆ ಗೊತ್ತಿಲ್ಲ. ಲಕ್ಷ್ಮಣ ಈತನ ಅಡ್ಡಹೆಸರು ಕೆಳಪ್ಪಗಾವಡೆ ಇರುತ್ತದೆ. ಅವರಿಗೆ ಗಾವಡೆ, ಕೆಳೋಜೆ ಮತ್ತು ಕೆಳಪ್ಪಗಾವಡೆ ಎನ್ನುವ ಅಡ್ಡ ಹೆಸರಿನಿಂದ ಕರೆಯುತ್ತಾರೆ ಎಂದರೆ ನಿಜ. ಲಕ್ಷ್ಮಣ ಈತನಿಗೆ ರಾಣಬಾ ಮತ್ತು ದತ್ತಾತ್ರೆಯ ಎನ್ನುವ 2 ಜನ ಮಕ್ಕಳು ಎಂದರೆ ನಿಜ, ಅವರಿಬ್ಬರೂ ಈಗ ಮೃತಪಟ್ಟಿದ್ದಾರೆ. ರಾಣಬಾ ಈತನ ಹೆಂಡತಿ ಮಕ್ಕಳು ಇದ್ದ ಬಗ್ಗೆ ನನಗೆ ಗೊತ್ತಿಲ್ಲ. ದತ್ತಾತ್ರೆಯ ಈತನ ಹೆಂಡತಿಯ ಹೆಸರು ದುಂಡುಬಾಯಿ ಮತ್ತು ಆತನ ಮಗ ವಸಂತ ಇರುತ್ತಾರೆ. ಲಕ್ಷ್ಮಣನಿಗೆ ಈತನಿಗೆ ಈರಪ್ಪ ಎನ್ನುವ ಅಜ್ಜ ಇದ್ದ ಎಂದರೆ ನನಗೆ ಗೊತ್ತಿಲ್ಲ. ಲಕ್ಷ್ಮಣನ ತಂದೆಯ ಹೆಸರು ರಾಣಬಾ ಮತ್ತು ಆತನಿಗೆ ಬಾವಕಣ್ಣಾ ಎನ್ನುವ ಸಹೋದರ ಇದ್ದ ಎಂದರೆ ನನಗೆ ಗೊತ್ತಿಲ್ಲ. ರಾಣಬಾ ಮತ್ತು ಬಾವಕಣ್ಣಾ ಖಾಸ ಸಹೋದರರು ಎಂದರೆ ಸರಿಯಲ್ಲ. ಬಾವಕಣ್ಣಾ ಈತನಿಗೆ ಮಾರುತಿ ಮತ್ತು ಯಲ್ಲಪ್ಪಾ ಎನ್ನುವ ಇಬ್ಬರು ಮಕ್ಕಳು ಇದ್ದರು ಎಂದರೆ ನಿಜ. ಮಾರುತಿ ಮೃತಪಟ್ಟಿದ್ದು ಆತನ ಹೆಂಡತಿಯಹೆಸರು ತುಳಸಾಬಾಯಿ ಎಂದರೆ ನಿಜ. ಈ ದಾವೆ ದಾಖಲ ಮಾಡಿದ ನಂತರ ತುಳಸಾಬಾಯಿ ಕೂಡಾ ಮೃತಳಾಗಿರುತ್ತಾರೆ ಎಂದರೆ ನಿಜ. ಮಾರುತಿ ಮತ್ತು ತುಳಸಾಬಾಯಿ ಇವರಿಗೆ ಮಕ್ಕಳು ಇಲ್ಲ ಎಂದರೆ ನಿಜ. ಯಲ್ಲಪ್ಪಾ ಈತನ ಹೆಂಡತಿ ಜನಾಬಾಯಿ ಎಂದರೆ ನಿಜ. ಅವರಿಗೆ ವಿಷ್ಣು, ಕಮಲ ಮತ್ತು ಅನುಸಯಾ ಎನ್ನುವ ಮಕ್ಕಳು ಇದ್ದರು ಎಂದರೆ ನಿಜ. ಅನುಸಯಾ ಮೃತಪಟ್ಟಿದ್ದು ಅವಳ ಮಗಳು ಕವಿತಾ ಎಂದರೆ ನನಗೆ ಗೊತ್ತಿಲ್ಲ.

ಲಕ್ಷ್ಮಣ ಈತನು ಜೀವಂತವಿದ್ದಾಗ ಆತನಿಗೆ ಸರ್ವೆ ನಂಬರ 161 ರಲ್ಲಿ 02 ಎಕರೆ 01 ಗುಂಟೆ ಮತ್ತು ಸರ್ವೆ ನಂಬರ 162 ರಲ್ಲಿ 02 ಎಕರೆ 01 ಗುಂಟೆ ಜಮೀನು ಇತ್ತು. ನಾನು ಸದರಿ ಜಮೀನುಗಳನ್ನು ನೋಡಿದ್ದೇನೆ. ಈ ದಾವೆಯನ್ನು ವಾದಿ ವಿಷ್ಣು 04 ಎಕರೆ 02 ಗುಂಟೆ ಜಮೀನಿನ ಬಗ್ಗೆ ಮಾಡಿದ್ದಾನೆ. ಸದರಿ ಎರಡು ಜಮೀನುಗಳನ್ನು ಹೊರತುಪಡಿಸಿ ಬೇರೆ ಯಾವ ಮಾಗಣಿ ಮಾಡಿದ್ದಾರೆ ಅಂತಾ ನನಗೆ ಗೊತ್ತಿಲ್ಲ. ಲಕ್ಷ್ಮಣ

ಮತ್ತು ಬಾವಕಣ್ಣಾ ಇವರ ನಡುವೆ ಯಾವಾಗಲೂ ವಿಭಾಗ ಆಗಿಲ್ಲ. ಲಕ್ಷ್ಮಣ ಮತ್ತು ಬಾವಕಣ್ಣಾ ಮೊದಲಿನಿಂದಲೂ ತಮ್ಮ ಅನುಕೂಲದ ಪ್ರಕಾರ ಆದಾರ ಕಾರ್ಡ ಪಡಿತರ ಚೀಟಿ ಇತ್ಯಾದಿ ದಾಖಲೆಗಳನ್ನು ಮಾಡಿಕೊಂಡು ವಾಸ ಇರುತ್ತಾ ಬಂದಿರುತ್ತಾರೆ ಎಂದರೆ ಸಾಕ್ಷಿ ಮೊದಲಿನಿಂದಲೂ ಅವರು ಬೇರೆ ವಾಸ ಇದ್ದಾರೆ ಅಂತಾ ಹೇಳುತ್ತಾರೆ.

ನಾನು 10 ನೇ ತರಗತಿ ಓದಿದ್ದೇನೆ. ನನಗೆ ಕನ್ನಡ ಭಾಷೆ ಓದಲು ಮತ್ತು ಬರೆಯಲು ಬರುವುದಿಲ್ಲ. ಸಾಕ್ಷಿ ಪ್ರಮಾಣ ಪತ್ರಕ್ಕೆ ನಾನೇ ಸ್ವತಃ ಮಾಹಿತಿ ಕೊಟ್ಟಿದ್ದೇನೆ. ಸರ್ವೆ ನಂಬರ 161 ಮತ್ತು 162 ರ ಜಮೀನುಗಳು ಮೃತ ದತ್ತಾತ್ರೆಯ ಈತನಿಗೆ ಯಾವ ಸಾಲಿನಲ್ಲಿ ಬಂದಿರುತ್ತವೆ ಅಂತಾ ನನಗೆ ಗೊತ್ತಿಲ್ಲ. ಆದರೆ ಭೂ ನ್ಯಾಯ ಮಂಡಳಿಯಿಂದ ಬಂದಿರುತ್ತದೆ. ಸದರಿ ದತ್ತಾತ್ರೆಯ ಸದರಿ ಜಮೀನುಗಳ ರೈತ ಹಕ್ಕು ಬೇಡಿ ಪಾರಂ ನಂ–7 ತುಂಬಿದ ವಿಷಯ ನನಗೆ ಗೊತ್ತಿದೆ, ಅದು ಯಾವ ದಿನಾಂಕಂದು ತುಂಬಿದ್ದಾನೆ ಅಂತಾ ನನಗೆ ಗೊತ್ತಿಲ್ಲ. ದತ್ತಾತ್ರೆಯ ಈತನಿಗೆ ಯಾವ ಡೈರಿಯ ಆಧಾರದ ಮೇಲೆ ಸದರಿ ಆಸ್ತಿಗಳು ಬಂದಿವೆ ಅಂತಾ ನನಗೆ ಗೊತ್ತಿಲ್ಲ. ಮೃತ ದತ್ತಾತ್ರೆಯ ಲಕ್ಷ್ಮಣ ಮತ್ತು ಬಾವಕಣ್ಣಾ ಇವರ ಒಟ್ಟು ಕುಟುಂಬದ ಸದಸ್ಯ ಅಂತಾ ಮತ್ತು ಆತನ ಹೆಸರಿನಲ್ಲಿ ಜಮೀನು ಇದ್ದುದ್ದರಿಂದ ಕುಟುಂಬದ ವತಿಯಿಂದ ಪಾರಂ ನಂ–7 ತುಂಬಿದ್ದ ಎಂದರೆ ಸರಿಯಲ್ಲ. ದತ್ತಾತ್ರೆಯ ಈತನು ತನ್ನ ಸಹೋದರ ರಾಣಬಾ ಮತ್ತು ಬಾವಕಣ್ಣನ ಮಕ್ಕಳಾದ ಮಾರುತಿ ಹಾಗೂ ಯಲ್ಲಪ್ಪಾ ರವರ ಪರವಾಗಿ ಪಾರಂ–ನಂ–7 ತುಂಬಿದ್ದ ಎಂದರೆ ಸಾಕ್ಷಿ ದತ್ತಾತ್ರೆಯ ಸ್ವತಃ ಪಾರಂ ನಂ–7 ತುಂಬಿದ್ದ ಎಂದು ಹೇಳುತ್ತಾರೆ. ಭೂ ನ್ಯಾಯ ಮಂಡಳಿ ದತ್ತಾತ್ರೆಯ ಮತ್ತು ಬಾವಕಣ್ಣಾನ ಕುಟುಂಬಕ್ಕೆ ಸದರಿ ಆಸ್ತಿಗಳನ್ನು ಮಂಜೂರು ಮಾಡಿ ನಿಕಾಲೆ ಮಾಡಿದೆ ಎಂದರೆ ಸರಿಯಲ್ಲ. ದತ್ತಾತ್ರೆಯ ಈತನ ಹೆಸರು ಸದರಿ ಆಸ್ತಿಗಳಿಗೆ ಎರಡು ಕುಟುಂಬದ ವತಿಯಿಂದ ದಾಖಲಾಗಿತ್ತು ಎಂದರೆ ಸರಿಯಲ್ಲ. ಸರ್ವೆ ನಂಬರ 161 ಮತ್ತು 162 ರ ಜಮೀನುಗಳನ್ನು ದತ್ತಾತ್ರೆಯ ಈತನ ಕುಟುಂಬದವರು ಮಾತ್ರ ಸಾಗು ಮಾಡುತ್ತಿದ್ದು, ಬಾವಕಣ್ಣಾನ ವಾರಸುದಾರರು ಸಾಗು ಮಾಡಿಲ್ಲ ಅಂತಾ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ವಾದಿ, ಪ್ರತಿವಾದಿಯರು ಖಾಸ ಅಣ್ಣ–ತಮ್ಮಂದಿರು ಅಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸಾಕ್ಷಿ ಅವರು ದೂರಿನ ಅಣ್ಣ–ತಮ್ಮಂದಿರು ಇರುತ್ತಾರೆ ಅಂತಾ

ಹೇಳುತ್ತಾರೆ. ದೂರದ ಅಣ್ಣ ತಮ್ಮಂದಿರು ಎಂದರೆ ಅವರ ಅಜ್ಜನ ಕಾಲದಿಂದ ಅಣ್ಣ ತಮ್ಮಂದಿರು ಇರುತ್ತಾರೆ. ವಾದಿ, ಪ್ರತಿವಾದಿಯರು ತಮ್ಮ ಹಿಸ್ಸೆದ ಜಮೀನುಗಳ ಮೇಲೆ ಯಾವ ಬ್ಯಾಂಕ ಮತ್ತು ಸೊಸೈಟಿಯಲ್ಲಿ ಯಾವ ಯಾವ ವರ್ಷಗಳಲ್ಲಿ ಮತ್ತು ಎಷ್ಟು ಸಾಲ ಪಡೆದಿದ್ದಾರೆ ಮತ್ತು ಮರುಪಾವತಿ ಮಾಡಿದ್ದಾರೆ ಅಂತಾ ನನಗೆ ಗೊತ್ತಿಲ್ಲ. ದಾವಾದ ಆಸ್ತಿಗಳಲ್ಲಿ ಮೊದಲು ದತ್ತಾತ್ರೆಯ ನಂತರ 1 ನೇ ಪ್ರತಿವಾದಿ ಕಬ್ಬು ಬೆಳೆದು ಕಾರ್ಖಾನೆಗೆ ಕಳುಹಿಸುತ್ತಾನೆ ಅಂತಾ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ ವಸಂತ ಮನೆ ಕಟ್ಟುವಾಗ 4–5 ಲಕ್ಷ ರೂಪಾಯಿ ಖರ್ಚು ಮಾಡಿದ ಬಗ್ಗೆ ದಾಖಲೆಗಳನ್ನು ನೋಡಿದ್ದೀಯಾ ಎಂದರೆ ಸಾಕ್ಷಿ ಅವರು ಕಟ್ಟಡದ ಸಾಮಗ್ರಿಗಳನ್ನು ತಂದಾಗ ನನಗೆ ತೋರಿಸುತ್ತಿದ್ದರು ಎಂದು ನುಡಿಯುತ್ತಾರೆ. ಸದರಿ ಕಟ್ಟಡದ ದಾಖಲೆಗಳು 1 ನೇ ಪ್ರತಿವಾದಿಯ ತಾಬಾದಲ್ಲಿದ್ದವು. 1 ನೇ ಪ್ರತಿವಾದಿ ಮನೆ ಕಟ್ಟಿಸಲು 4–5 ಲಕ್ಷ ರೂಪಾಯಿ ಖರ್ಚು ಮಾಡಿಲ್ಲ ಮತ್ತು ನನಗೆ ಯಾವುದೇ ದಾಖಲೆ ತೋರಿಸದೆ ಇದ್ದರೂ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮನೆ ಕಟ್ಟಿದ ನಂತರ ವಿದ್ಯುತ ಸೌಲಭ್ಯ ಮತ್ತು ನೀರಿನ ನಳದ ಸಂಪರ್ಕ ಪಡೆದ ದಿನಾಂಕ ನನಗೆ ನೆನಪಿಲ್ಲ. ಕಟ್ಟಿದ ಮನೆಗೆ 1 ನೇ ಪ್ರತಿವಾದಿಯ ಮಗ ದಯಾನಂದ ಮತ್ತು ಆತನ ತಾಯಿ ಕೃಷ್ಣಾಬಾಯಿ ಇವರ ಹೆಸರು ಯಾವಾಗ ದಾಖಲಾಗಿದೆ ಅಂತಾ ಗೊತ್ತಿಲ್ಲ. ಸದರಿ ಮನೆ ಜಮೀನಿನಲ್ಲಿ ಕಟ್ಟಿದ್ದಾರೆ. ಸದರಿ ಮನೆ ವ್ಯವಸಾಯದ ಮನೆ ಇರುವದರಿಂದ ವಾದಿ, ಪ್ರತಿವಾದಿಯರು ಜಂಟಿಯಾಗಿ ಉಪಯೋಗಿಸುತ್ತಾರೆ ಎಂದರೆ ಸರಿಯಲ್ಲ.

ಶಿವಾಜಿ ಲೋಹಾರ ಈತನಿಗೆ ವಾದಿ ವಿಷ್ಣು ಯಾವ ವಿಪಿಸಿ ಮನೆ ಮತ್ತು ಎಷ್ಟು ಕ್ಷೇತ್ರದ ಆಸ್ತಿ ಮಾರಾಟ ಮಾಡಿದ್ದಾನೆ ಅಂತಾ ನನಗೆ ಗೊತ್ತಿಲ್ಲ. ಮೃತ ದತ್ತಾತ್ರೆಯ ಗಾವಡೆ ಈತನು ಯಾವ ಆಸ್ತಿಯನ್ನು ಭರಮಾ ಕೊಕಿತಕರ ಈತನಿಗೆ ಮಾರಾಟ ಮಾಡಿದ್ದಾನೆ ಎಂದರೆ ಸಾಕ್ಷಿ ವಾದಿಯು ಖರೀದಿ ಕೊಟ್ಟ ಆಸ್ತಿಯ ಪಕ್ಕದ ಖುಲ್ಲಾ ಜಾಗೆ ಮಾರಾಟ ಮಾಡಿದ್ದಾನೆ ಎಂದು ಹೇಳುತ್ತಾರೆ. ವಾದಿ ವಿಷ್ಣು ಶಿವಾಜಿ ಲೋಹಾರ ಈತನಿಗೆ ಕ್ರಯಕ್ಕೆ ಕೊಟ್ಟ ಆಸ್ತಿ ಮತ್ತು ಮೃತ ದತ್ತಾತ್ರೆಯ ಭರಮಾ ಕೊಕಿತಕರ ಈತನಿಗೆ ಖರೀದಿ ಕೊಟ್ಟ ಆಸ್ತಿ ಒಂದೆ ವಿಪಿಸಿ ನಂಬರ 182 ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಆ ಕಾಲಕ್ಕೆ ವಾದಿ ವಿಷ್ಣು ಮತ್ತು ದತ್ತಾತ್ರೆಯ ಇವರ ಗರಾನೆಗಳು ಒಟ್ಟಾಗಿ ಇದ್ದು ಇಬ್ಬರ ಹೆಸರುಗಳು ದಾಖಲ

ಇರುವದರಿಂದ ಅವರಿಗೆ ಇಚ್ಚೆ ಪ್ರಕಾರ ಖರೀದಿ ಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ವಾದಿ, ಪ್ರತಿವಾದಿಯರು ಮೊದಲಿನಿಂದ ತಮ್ಮ ಹಿಸ್ಸೆಯ ಪ್ರಕಾರ ತಮ್ಮ ಆಸ್ತಿಗಳನ್ನು ಬೇರೆ ವಹಿವಾಟ ಮಾಡುತ್ತಾ ಬಂದಿದ್ದಾರೆ ಅಂತಾ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈವರೆಗೂ ವಾದಿ, ಪ್ರತಿವಾದಿಯರ ಮಧ್ಯೆ ಯಾವುದೇ ಹಿಸ್ಸೆ ಮತ್ತು ವಿಭಾಗ  ಆಗಿಲ್ಲ ಎಂದರೆ ಸರಿಯಲ್ಲ. ಮೃತ ದತ್ತಾತ್ರೆಯ ಘಟಪ್ರಬಾ ನದಿ ನೀರು ಜಮೀನಿಗೆ ತೆಗೆದುಕೊಂಡು ಹೋಗಲು ತಾನೇ ಸ್ವತಃ ಎಷ್ಟು ಖರ್ಚು ಮಾಡಿದ್ದಾನೆ ಎಂದು ನನಗೆ ಗೊತ್ತಿಲ್ಲ. ಅದೇ ವಿದ್ಯುತ ಮೋಟಾರ ಪಂಪಸೆಟ್ಟನಿಂದ ವಾದಿಯರು ನೀರಾವರಿ ಸೌಲಭ್ಯ ಪಡೆದುಕೊಂಡಿದ್ದಾರೆ ಎಂದರೆ ಸರಿಯಲ್ಲ. ಯಾವ ದಿನಾಂಕ ವಿದ್ಯುತ ಮೋಟಾರಿಗೆ ವಿದ್ಯುತ ಸೌಲಭ್ಯ ಪಡೆದಿದ್ದಾನೆ ಎಂದು ನನಗೆ ಗೊತ್ತಿಲ್ಲ. ಗೌರಾಬಾಯಿ ಲಕ್ಕು ಇವರಿಂದ ಖರೀದಿಸಿದ  ಖುಲ್ಲಾ ಜಾಗೆಗೆ ದತ್ತಾತ್ರೆಯ ಗಾವಡೆ, ಗೌರಾಬಾಯಿ ಲಕ್ಕು ಮತ್ತು ವಾದಿ ವಿಷ್ಣು ರವರ ನಡುವೆ ಭಿನ್ನಾಭಿಪ್ರಾಯ ಉಂಟಾಗಿದ್ದರಿಂದ ಯಾವ ನ್ಯಾಯಾಲಯದಲ್ಲಿ ಕೇಸ ದಾಖಲಿಸಿದ್ದರು ಮತ್ತು ಸದರಿ ಕೇಸ ನಂಬರ ಎಷ್ಟು ಎಂದರೆ ನನಗೆ ಗೊತ್ತಿಲ್ಲ. ಸದರಿ ದಾವೆ ದಾಖಲಿಸಿದ ಕಾಲಕ್ಕೆ ಅವರು ತಮ್ಮ ತಮ್ಮ ಆಸ್ತಿಗಳನ್ನು ಮೋಜ ಮಾಪ ಮಾಡಿದ ನಂತರ ಅವರಿಗೆ ಕ್ಷೇತ್ರ ಎಷ್ಟು ಎಷ್ಟು ಬಂದಿದೆ ಎಂದು ನನಗೆ ಗೊತ್ತಿಲ್ಲ. ನಾನು ನನ್ನ ಸಾಕ್ಷಿಯಲ್ಲಿ ಹೇಳಿದಂತೆ ವಾದಿ ಪ್ರತಿವಾದಿಯರ ಮಧ್ಯ ನಮ್ಮ ಗ್ರಾಮ ಪಂಚರ ಮಧ್ಯ ಅಪಸಾತ ಮಾತುಕತೆ ಮಾಡಿಲ್ಲ ಈ ಬಗ್ಗೆ ಅವರಲ್ಲಿ ಪಂಚಾಯತ ಕುರಿತು ಯಾವುದೇ ದಾಖಲೆ ಆಗಿಲ್ಲ ಅಂತಾ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ವಾದಿ ವಿಷ್ಣು ಯಾವ ದಿನಾಂಕದಂದು ಪ್ರತಿವಾದಿ ದಯಾನಂದ ಇತನಿಂದ 3 ಲಕ್ಷ ಸಂಚಕಾರ ಪಡೆದು ಕರಾರು ಪತ್ರ ಬರೆದುಕೊಟ್ಟಿರುವ ದಿನಾಂಕ ನನಗೆ ಗೊತ್ತಿಲ್ಲ. ಸದರಿ ವ್ಯವಹಾರ 3 ಲಕ್ಷ 50 ಸಾವಿರಗಳಿಗೆ ಆಗಿದ್ದು, 3 ಲಕ್ಷ ಮುಂಗಡ ಪಡೆದಿದ್ದಾನೆ. ಸದರಿ ವ್ಯವಹಾರ ರಿಸನಂ–18/7  ಆಗಿದ್ದು, ಅದರ ಒಟ್ಟು ಕ್ಷೇತ್ರ 02 ಎಕರೆ ಇರುತ್ತದೆ. ವಾದಿ ಪ್ರತಿವಾದಿಯರ ನಡುವೆ 4–5 ಸಲ ರಾಜೀ ಪಂಚಾಯತಿ ಆಗಿತ್ತು ಎಂದರೆ ಸರಿಯಲ್ಲ. ಇದು ಅಲ್ಲದೆ 2 ಬಾರಿ ಬಾಯಿ ತೊಂಡಿ ಮಾತುಕತೆ ಮುಖಾಂತರ 2–3 ಬಾರಿ ಲೇಖಿ ಟಿಪ್ಪಣಿ ಬರೆಯುವ ಮುಖಾಂತರ ರಾಜೀ ಸಂದಾನ ಆಗಿತ್ತು ಎಂದರೆ ಸರಿಯಲ್ಲ. ಸದರಿ ರಾಜೀ ಪಂಚಾಯತಿ ದಾವೆ ಆಸ್ತಿಗಳಿಗೆ ಸಂಬಂಧಿಸಿದಂತೆ ಆಗಿತ್ತು ಎಂದರೆ ಸಾಕ್ಷಿ

ಪಂಚಾಯತಿ ಆಗಿಲ್ಲ ಎಂದು ನುಡಿಯುತ್ತಾರೆ. ನಮ್ಮ ಊರಿನ ಸುಮಾರು 15-20 ಪ್ರಮುಖ ಹಿರಿಯರ ಸಮ್ಮುಖದಲ್ಲಿ ರಾಜೀ ಪಂಚಾಯತಿ ಆಗಿತ್ತು ಎಂದರೆ ಸರಿಯಲ್ಲ. ಜನಾರ್ದನ ಪಾಟೀಲ ನಮ್ಮ ಮೊದಗಾ ಗ್ರಾಮದವರು ಎಂದರೆ ನಿಜ. ಆತನು ಊರಲ್ಲಿ ಪಂಚಾಯತಿ ಮಾಡುತ್ತಾ ಬಂದಿರುತ್ತಾನೆ ಎಂದರೆ ನಿಜ. ಪ್ರತಿವಾದಿ ವಸಂತ ಈತನ ತಾಬಾದಲ್ಲಿರುವ ಜಮೀನಿಗೆ ಲಗತ್ತಾಗಿ ಪೂರ್ವಕ್ಕೆ ನನ್ನ ಮಾಲ್ಕೀಯ ಜಮೀನು ಇರುತ್ತದೆ ಎಂದರೆ ನಿಜ. ನನ್ನ ಜಮೀನಿನಲ್ಲಿ ನಾನು ಕಬ್ಬು ಬೆಳೆಯುತ್ತೇನೆ. ನನ್ನ ಜಮೀನಿನಲ್ಲಿ ಬೋರ ಹಾಗೂ ಬಾವಿ ನೀರಾವರಿ ಸಾಧನ ಇಲ್ಲ ಎಂದರೆ ನಿಜ. ನಾನು ನನ್ನ ಜಮೀನಿಗೆ ವಸಂತ ಮತ್ತು ದಯಾನಂದ ಇವರಿಂದ ನೀರು ಪಡೆಯುತ್ತಾ ಬಂದಿದ್ದೇನೆ ಎಂದರೆ ನಿಜ. ಸದರಿ ನೀರಿನಿಂದ ಕಬ್ಬು ಮತ್ತು ಇತರೇ ಬೆಳೆ ಬೆಳೆಯುತ್ತೇನೆ ಎಂದರೆ ನಿಜ. ಈ ಮೊದಲು ವಾದಿ ನನ್ನ ಹೆಸರನ್ನು ಸಾಕ್ಷಿದಾರರ ಯಾದಿಯಲ್ಲಿ ಸಾಕ್ಷಿದಾರ ಅಂತಾ ನಮೂದಿಸಿದ್ದರು ಎಂದರೆ ಸರಿಯಲ್ಲ. ವಾದಿ ನನ್ನನ್ನು ಕೇಳಿ ಸಾಕ್ಷಿದಾರ ಅಂತಾ ನನ್ನ ಹೆಸರು ನಮೂದಿಸಿದ್ದ ಎಂದರೆ ಸರಿಯಲ್ಲ. ದಯಾನಂದ ಈತನು ವಿಷ್ಣು ಈತನೊಂದಿಗೆ ಮಾಡಿಕೊಂಡ ಕರಾರಿನ ಆಸ್ತಿಯನ್ನು ತೆಗೆದುಕೊಂಡು ನನಗೆ ಖರೀದಿ ಕೊಡುತ್ತೇನೆ ಅಂತಾ ಹೇಳಿರುವುದರಿಂದ ಆತನ ಪರವಾಗಿ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಯಾನಂದ ಈತನು ತನ್ನ ಪರವಾಗಿ ಸಾಕ್ಷಿ ಹೇಳದೆ ಇದ್ದರೆ ನನಗೆ ಮುಂದೆ ಸಿಗುವ ಆಸ್ತಿ 18/7 ನೇದ್ದನ್ನು ಕೊಡುವದಿಲ್ಲ ಮತ್ತು ನನ್ನ ಜಮೀನಿಗೆ ನೀರು ಸಹ ಕೊಡುವದಿಲ್ಲ ಅಂತಾ ಹೆದರಿಕೆ ಹಾಕಿರುವದರಿಂದ ನಾನು ಈ ದಿನ ಅವರ ಪರವಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಜಮೀನಿಗೆ ನೀರು ಸಿಗದೆ ಇದ್ದರೆ ನೀರಾವರಿ ಬೆಳೆ ಬೆಳೆಯುವದು ಬಂದ ಆಗುತ್ತದೆ ಅಂತಾ ಪ್ರತಿವಾದಿಯರ ವಿರುದ್ಧ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಯಾನಂದ ಈತನು ವಾದಿ ಈತನಿಗೆ 3 ಲಕ್ಷ ರೂ ಕೊಟ್ಟು ಸದರಿ ಕರಾರು ಪತ್ರ ಮಾಡಿಕೊಂಡಿದ್ದಾನೆ ಎನ್ನುವ ಪತ್ರಕ್ಕೆ ನಾನು ಸಹಿ ಮಾಡಿಲ್ಲ. ವಾದಿ ಮತ್ತು ಪ್ರತಿವಾದಿಯರ ಮನೆತನದ ಬಗ್ಗೆ ಯಾವುದೇ ಮಾಹಿತಿ ಇರದೆ ಇದ್ದರೂ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ.

ಹಿರಿಯ ದಿವಾಪಣಿ ನ್ಯಾಯಾಧೀಶರು, ಹುಕ್ಕೇರಿ
ಸಂಚಾರಿ ನ್ಯಾಯಾಲಯ ಸಂಕೇಶ್ವರ

OS ex parte evidence

RBP Adv present.

IKH Adv for DSN Adv present.

Defendant No.3 and PSR Adv present.

Plaintiff No.3 present and filed evidence affidavits as PW-1 and partly Examined. Ex. P.1 to 9 marked.

Sri.IKH Adv prayed time for further chief examination of PW-1.

Cost paid.

Call on 16-12-2023.

**Senior Civil Judge, Hukkeri**
**Itinerary Court Sankeshwar.**